ತೋಟಗಾರಿಕೆಯ ಹಣ್ಣು ಹಂಪಲುಗಳನ್ನು ಮಾರುವ ಮಾರುಕಟ್ಟೆ ಬಗ್ಗೆ

೫೪೪. ಶ್ರೀ ಜಿ ರಾಜುಗೌಡ (ಹನೂರು). — ಮಾನ್ಯ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ತೋಟಗಾರಿಕೆ ಉತ್ಪನ್ನಗಳಾದ ಹೂವು, ಹಣ್ಣು ಹಾಗೂ ತರಕಾರಿಗಳನ್ನು ಹೆಚ್ಚಿಸಲು ಹಾಗೂ ಸುಲಭವಾಗಿ ಮಾರಾಟ ಮಾಡಲು ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು ?

ಆ) ರಾಜ್ಯದ ಒಟ್ಟು ಬೇಸಾಯದ ಜಮೀನಿನಲ್ಲಿ ಶೇಕಡಾ ಎಷ್ಟರಲ್ಲಿ ತೆಂಗು, ಹೂವು ಹಣ್ಣು ಹಾಗೂ ತರಕಾರಿ ಬೆಳೆಯಲಾಗುತ್ತಿದೆ ?

೫೦೬. ಶ್ರೀ ವೈ. ಕೆ. ರಾಮಯ್ಯ (ತೋಟಗಾರಿಕೆ ರಾಜ್ಯ ಸಚಿವರು). —

ಅ) ರಾಜ್ಯದಲ್ಲಿ ತೋಟಗಾರಿಕೆ ಉತ್ಪಾದನೆಗಳನ್ನು ಹೆಚ್ಚಿಸಲು ಹಾಗೂ ಮಾರಾಟ ಮಾಡಲು ಸ್ಥೂಲವಾಗಿ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಲಾಗಿದೆ.

೧) ರೈತರಿಗೆ ತರಬೇತಿ

೨) ಬೆಳೆಗಳ ಹಾಗೂ ತೋಟಗಾರಿಕೆ ಪದ್ಧತಿಗಳಿಗೆ ಸಂಬಂಧಿಸಿದಂತೆ ವಿಸ್ತರಣೆ

೩) ಪ್ರಾತ್ಯಕ್ಷಿತೆ

೪) ಗುಣಮಟ್ಟವುಳ್ಳ ಬೀಜ ಹಾಗೂ ಸಸಿಗಳನ್ನು ಉತ್ಪಾದಿಸಿ ರೈತರಿಗೆ ಒದಗಿಸುವುದು.

೫) ಸಹಕಾರಿ ಸಂಘಗಳಿಂದ ಹಾಗೂ ವಾಣಿಜ್ಯ ಬ್ಯಾಂಕುಗಳಿಂದ ಸಾಲ ಪಡೆಯಲು ನೆರವು

೬) ಸಸ್ಯ ಸಂರಕ್ಷಣೆಗೆ ಸಹಾಯ

೭) ತಾಂತ್ರಿಕ ನೆರವು

೮) ಪ್ರತಿಯೊಂದು ಜಿಲ್ಲೆಯಲ್ಲಿ ತೋಟಗಾರಿಕೆ ಉತ್ಪಾದಕರ ಮತ್ತು ಸಂಸ್ಕರಣೆಗಾರರ ಮಾರಾಟ ಸಹಕಾರ ಸಂಘಗಳನ್ನು ಸ್ಥಾಪಿಸಲು ನೆರವು

೯) ಮಾರಾಟಕ್ಕೆ ಪ್ರೋತ್ಸಾಹ ನೀಡಲು ಸಮಗ್ರ ಯೋಜನೆಯ ರೂಪಣೆ

ಆ) ಶೇಕಡಾವಾರು ವಿವರ :

ಕ್ರಮ ಸಂಖ್ಯೆ	ಬೆಳೆ	ಒಟ್ಟು ಬೇಸಾಯ ಪ್ರದೇಶಕ್ಕೆ ಶೇಕಡಾ
೧.	ತೆಂಗು	೨.೯
೨.	ಹೂವು	೦.೧
೩.	ಹಣ್ಣು	೧.೬
೪.	ತರಕಾರಿ	೧.೪

ಭೂ ಸಂರಕ್ಷಣಾ ಯೋಜನೆಗೆ ಮಂಜೂರಾದ ಹಣ

೫೦೬. ಶ್ರೀಮತಿ ಸುಮಾ ವಸಂತ (ವಿರಾಜಪೇಟೆ). — ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೊಡಗು ಜಿಲ್ಲೆಯಲ್ಲಿ ಭೂಸಾರ ಸಂರಕ್ಷಣಾ ಯೋಜನೆ ಕೈಗೊಳ್ಳಲಾಗಿದೆಯೇ

ಆ) ಹಾಗಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ಈ ಯೋಜನೆಗೆ ಮಂಜೂರಾದ ಹಣ ಎಷ್ಟು ಹಾಗೂ ಹಣ ವಿನಿಯೋಗಿಸದೆ ಸರ್ಕಾರಕ್ಕೆ ವಾಪಸ್ಸು ಕಟ್ಟಿದ ಹಣ ಎಷ್ಟು ?

ಶ್ರೀ ಆರ್. ವಿ. ದೇಶಪಾಂಡೆ (ಕೃಷಿ ಸಚಿವರು).—

ಅ) ಹೌದು

ಆ) ಕಳೆದ ಮೂರು ವರ್ಷಗಳಲ್ಲಿ ಕೊಡಗು ಜಿಲ್ಲೆಯಲ್ಲಿ ಭೂಸಾರ ಸಂರಕ್ಷಣಾ ಕಾರ್ಯಕ್ರಮಗಳಿಗಾಗಿ ಮಂಜೂರು ಮಾಡಲಾದ ಹಾಗೂ ವಿನಿಯೋಗಿಸದೆ ಹಿಂದಿರುಗಿಸಿದ ಹಣದ ವಿವರ ಕೆಳಗಿನಂತಿದೆ.

ವರ್ಷ	ಮಂಜೂರು ಮಾಡಲಾದ ಹಣ (ಲಕ್ಷ ರೂ.ಗಳಲ್ಲಿ)	ಹಿಂದಿರುಗಿಸಿದ ಹಣ
೧೯೮೪–೮೫	೦.೮೦	೦.೧೯
೧೯೮೫–೮೬	೧೩.೮೪	೯.೩೪
೧೯೮೬–೮೭	೩೪.೩೩	೭.೭೦
ಒಟ್ಟು	೪೯.೦೧	೧೭.೨೩

ಶಾಲಾ ಕಟ್ಟಡಗಳ ದುರಸ್ತಿ ಬಗ್ಗೆ

೫೦೯. ಶ್ರೀಮತಿ ಸುಮಾ ವಸಂತ (ವೀರಾಜ ಪೇಟೆ).— ಮಾನ್ಯ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೪–೮೫, ೮೫–೮೬ ಮತ್ತು ೮೬–೮೭ನೇ ಸಾಲುಗಳಲ್ಲಿ ರಾಜ್ಯದಲ್ಲಿ ಶಾಲಾ ಕಟ್ಟಡಗಳ ದುರಸ್ತಿ ಬಗ್ಗೆ ಮಂಜೂರಾದ ಹಣ ಎಷ್ಟು ?

ಆ) ಆ ಪೈಕಿ ಕೊಡಗು ಜಿಲ್ಲೆಗೆ ಬಿಡುಗಡೆಯಾದ ಹಣ ಎಷ್ಟು ? (ತಾಲ್ಲೂಕುವಾರು ವಿವರ ನೀಡಬೇಕಾಗಿ ವಿನಂತಿ)?

ಇ) ಕೊಡಗು ಜಿಲ್ಲೆಯಲ್ಲಿ ಶಾಲಾ ಕಟ್ಟಗಳಿಗೆ ಹೊಂದಿಕೊಂಡಂತಿರುವ ಜಾಗ ಕಂದಾಯ ಇಲಾಖೆಗೆ ಸೇರಿದೆಯೋ ಅಥವಾ ವಿದ್ಯಾ ಇಲಾಖೆಗೆ ಸೇರಿದೆಯೋ ?

ಈ) ಹಾಗಿದ್ದಲ್ಲಿ ಅಂತಹ ಶಾಲಾ ಕಟ್ಟಡಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರಗಳನ್ನು ನೀಡಬೇಕಾಗಿ ವಿನಂತಿ) ?

ಉ) ಮೇಲ್ಕಂಡಂತೆ ಶಾಲೆಗಳಿಗೆ ಹೊಂದಿಕೊಡಂತೆ ಎಲ್ಲೆಲ್ಲಿ ಖಾಲಿ ಜಾಗವಿದೆಯೋ ಆ ಜಾಗವನ್ನು ಶಾಲೆಗಳಿಗೇ ಬಿಟ್ಟುಕೊಡುವ ವ್ಯವಸ್ಥೆಯನ್ನು ಮಾಡಲಾಗಿದೆಯೇ ?

ಶ್ರೀ ಬಿ. ಸೋಮಂಶೇಖರ್ (ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು).—

ಅ) ಪ್ರಾಥಮಿಕ ಶಾಲಾ ಕಟ್ಟಡಗಳ ದುರಸ್ತಿಗಾಗಿ ಒದಗಿಸಿರುವ ಹಣದ ವಿವರ

ಸಾಲಿನಲ್ಲಿ		
೧೯೮೪–೮೫	೧ ಕೋಟಿ	೭ ಲಕ್ಷ
೧೯೮೫–೮೬	೫೨.೫೦ ಲಕ್ಷ	
೧೯೮೬–೮೭	೧ ಕೋಟಿ ೨೫ ಲಕ್ಷ	

ಸರ್ಕಾರಿ ಪ್ರೌಢಶಾಲಾ ಕಟ್ಟಡಗಳ ದುರಸ್ತಿಗಾಗಿ ಸ್ವೀಕರಿಸಿರುವ ಪ್ರಸ್ತಾವನೆಗಳ ಅಗತ್ಯವನ್ನು ಪರಿಶೀಲಿಸಿ ದುರಸ್ತಿಗೊಳಿಸಲು ಸರ್ಕಾರದ ಮಟ್ಟದಲ್ಲಿ ಸೂಕ್ತ ಕ್ರಮ ಜರುಗಿಸಲಾಗಿದೆ. ೧೯೮೭–೮೮ನೇ ಸಾಲಿನಿಂದ ಈ ಶಾಲೆಗಳು ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಒಳಪಡಿಸಿದೆ. ಇನ್ನು ಮುಂದೆ ದುರಸ್ತಿ ಕಾರ್ಯವನ್ನು ಅವರೇ ನೋಡಿಕೊಳ್ಳುತ್ತಾರೆ.